Arrest and Release of a Member-Announcement

MADAM SPEAKER.—I have received a communication dated 9th July, 1977 from the Circle Inspector of Police, Ulsoorgate Sub-Division, Bangalore, stating that Sri Konandur Lingappa, Member, Legislative Assembly, was arrested under Section 151(1) of the Code of Criminal Procedure, 1973 at 3-45 P.M. on 9th July 1977 and that he was released on the same day at 4-05 P.M.

Personal explanation by Sri C. V. Venkatarayappa

re : Administration of Colleges run by Chikkaballapur Municipality

† ಶ್ರೀ ಸಿ.ವಿ. ವೆಂಕಟರಾಯಪ್ಪ (ಚಿಕ್ಕಬಳ್ಳಾಪುರ).—ಈ ತಿಂಗಳು 6ನೇ ತಾರೀಖು ನನ್ನ ವಿಚಾರದಲ್ಲಿ ಮಾನ್ಯ ಶ್ರೀ ಬೈರೇಗೌಡರು ಒಂದು ಪ್ರಶ್ನೆಯನ್ನು ಕೇಳಿದ್ದರು. ಅದಕ್ಕೆ ಮುನಿಸಿಪಲ್ ಖಾತೆಯ ಸಚಿವರು ಕೆಲವು ಜವಾಬುಗಳನ್ನು ಕೊಟ್ಟಿದ್ದಾರೆ ಆ ವಿಚಾರದಲ್ಲಿ ಉಭಯತರೂ ತಪ್ಪು ಕಲ್ಪನೆ ಮಾಡಿಕೊಂಡಿದಾರೆ ಎನ್ನುವುದು ನನ್ನ ವಾದ.

ಅಧ್ಯಕ್ಷರು.—ಇಪತ್ತು ಪರ್ಸನಲ್ ಎಕ್ಸ್‌ಪ್ಲನೇಷನ್ನಿಗೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ವೆಂಕಟರಾಯಪ್ಪನವರು ನನಗೆ ಒಂದು ಕಾಗದ ಬರೆದಿದ್ದಾರೆ. ಅದು ಅವರ ಸ್ಕೂಲಿನ ವಿಚಾರವಾದ್ದರಿಂದ ನಾನು ಅವರಿಗೆ ಹೇಳಿಕೆ ಕೊಡಲು ಅವಕಾಶ ಮಾಡಿಕೊಡುತ್ತಿದ್ದೇನೆ.

ಶ್ರೀ ಸಿ.ವಿ. ವೆಂಕಟರಾಯಪ್ಪ.—ಶ್ರೀಮಾನ್ ಬೈರೇಗೌಡರ ಪ್ರಶ್ನೆಗೆ ಉತ್ತರ ಕೊಡುತ್ತಾ ಪುರಸಭಾ ಕಾಲೇಜ್ ಎನ್ನುವ ಬಿ.ಎಟ್. ವಿದ್ಯಾ ಸಂಸ್ಥೆಯನ್ನು ನಾನು ನಡೆಸುತ್ತಿದ್ದೇನೆ, ಅದಕ್ಕೆ ಮುನಿಸಿಪಲ್ ಕಾಲೇಜಿನಿಂದ ಹಣವನ್ನು ಕೊಟ್ಟಿದ್ದಾರೆ ಎನ್ನುವುದು ಸಚಿವರ ಒಂದು ವಾದ. ಅದಕ್ಕೆ ಆಧಾರ ಮುನಿಸಿಪಲ್ ಕಾಲೇಜಿನ ಆಡಿಟ್ ವರದಿ ಈ ಆಡಿಟ್ ವರದಿ ಪುರಸಭಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸೀತಾರಾಮರಾಯರು ಆಡಿಟರ್ಸ್‌ಗೆ ಕೊಟ್ಟ ಇನ್‌ಫರೆಮೇಷನ್‌ನಿಂದ ಬಂತು. ಶ್ರೀ ಬೈರೇಗೌಡರು ಈಗ ನಾನು ಹೇಳುವ ವಿಚಾರದ ಬಗ್ಗೆ ಗಮನ ಕೊಡಬೇಕು. ಅವರು ಆಡಿಟರ್ಸ್‌ಗೆ ನಾನು ಇಷ್ಟು ಹಣವನ್ನು ಕೊಡಿ ಎಂದು ಕಾಗದವನ್ನು ಬರೆದು ಕಳುಹಿಸಿದ್ದನ್ನು ತೋರಿಸಿದ್ದಾರೆ. ಅವರು ಚಕ್‌ನಲ್ಲಿ ಹಣ ಕೊಟ್ಟಿರುವುದನ್ನು ತೋರಿಸಿದ್ದಾರೆ ಆ ಪತ್ರವನ್ನು ಆಡಿಟರ್ಸ್ ಒಪ್ಪಿದ್ದಾರೆ. ಆಡಿಟರ್ಸ್ ಅದನ್ನೇ ನಂಬಿಕೊಂಡು ಬರೆದುಕೊಂಡಿದ್ದಾರೆ. 60-70 ಸಾವಿರ ರೂಪಾಯಿಗಳನ್ನು ಮುನಿಸಿಪಲ್ ಕಾಲೇಜಿನಿಂದ ನಾನು ನಡೆಸುವ ಕಾಲೇಜಿಗೆ ಕೊಟ್ಟಿದೆಯೆಂದು ಹೇಳಿದ್ದಾರೆ.ಇದರಲ್ಲಿ ಒಂದು ವಿಚಿತ್ರವಾದ ಸಂಗತಿ ಇದೆ ಮುನಿಸಿಪಲ್ ಕಾಲೇಜಿನ ಪ್ರಿನ್ಸಿಪಾಲರು ಬಿ ಎಡ್, ಕಾಲೇಜನ್ನು ನಾನು ಸ್ಟಾರ್ಟ್ ಮಾಡಿದಾಗ ಅದಕ್ಕೂ ಅವರೇ ಪ್ರಿನ್ಸಿಪಾಲ್ ಆಗಿದ್ದರು. ಅವರು ಬಿ.ಎಡ್. ಕಾಲೇಜಿಗೆ ಹೋದಂದಿನಿಂದಲೂ ಹುಡುಗರಿಂದ ಡೋನೇಷನ್, ಫೀಜು ವಸೂಲು ಮಾಡುತ್ತಿದ್ದರು 6—9—1975ರಲ್ಲಿ ಈ ಪ್ರಿನ್ಸಿಪಾಲ್ ಅವರು ಚಾರ್ಜ್ ತೆಗೆದುಕೊಂಡರು. ಇವರು ಚಾರ್ಜ್ ಕೊಟ್ಟಾಗ್ಗೆ ಕ್ಯಾಷ್ ಬುಕ್ ಬ್ಯಾಲೆನ್ಸ್ ಪ್ರಕಾರ ಕೇವಲ 8 ಸಾವಿರ ರೂಪಾಯಿಗಳಿತ್ತು. ಆದರಲ್ಲಿ ಡೋನೇಷನ್ ಮೊತ್ತ ಸೇರಿರಲಿಲ್ಲ, ಬರೀ ಡಿಪಾಸಿಟ್ ಮತ್ತು ಫೀಸ್‌ಗೆ ಸಂಬಂಧಪಟ್ಟ ಹಣ ಮಾತ್ರ ಇತ್ತು ಎಂಬುದಾಗಿ ಹೇಳಿದಾ ಅದರ ಪೈಕಿ 6 ಸಾವಿರ ರೂಪಾಯಿಗಳನ್ನು ಮಾತ್ರ ಉಳಿಸಿಕೊಂಡಿದ್ದೇನೆಂಬುದಾಗಿ ಅವರು ಸಹಿ ಹಾಕಿ ಕೊಟ್ಟಿದ್ದಾರೆ. ಆ ಕಾಗದದ ಜೊತೆಗೆ ಲೆಕ್ಕ ಕೊಡಿ, ದುಡ್ಡು ಕೂಡಿ ಎಂದು ಅವರನ್ನು ಕೇಳಿದರೆ, ಅವರು ಆ ರೀತಿ ಲೆಕ್ಕ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಬಿ.ಎಡ್. ಕಾಲೇಜ್ ಹುಡುಗರಿಂದ ವಸೂಲು ಮಾಡಿದ ಹಣವನ್ನೂ ಸಹ ಡೊನೇಷನ್ ಮೊಬಲಗಿಗೆ ಸೇರಿಸಿದೆ ಇದನ್ನು ಕ್ಯಾಷ್ ಬುಕ್ ಬ್ಯಾಲೆನ್ಸ್‌ನಲ್ಲಿ ತೋರಿಸಿದ್ದಾಗಿದೆ ನನ್ನ ಹತ್ತಿರ 6 ಸಾವಿರ ರೂಪಾಯಿಗಳನ್ನು ಉಳಿಸಿಕೊಂಡಿದ್ದೇನೆಂಬುದಾಗಿ ಅವರು ಸಹಿ ಹಾಕಿ ನನಗೆ ಒಂದು ಕಾಗದವನ್ನು ಕೊಟ್ಟಿದ್ದಾರೆ ನನ್ನ ಬಿ.ಎಡ್ ಕಾಲೇಜಿನ ಹಣವನ್ನು ಅದಕ್ಕೆ ಸೇರಿಸಿ ಅವರು ನನಗೆ ಯಾವ ಚಕ್